ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆಯುಕ್ತರು, ಮಹಾನಗರ ಪಾಲಿಕೆ, ಎನ್.ಆರ್. ವೃತ್ತ, ಬೆಂಗಳೂರು – 560 002.

ನಂ. ಜೆಡಿಟಿಪಿ (ದ)/ ಜಿಎಲ್/1874/15-16 ದಿನಾಂಕ: 29-2-2016

## ಕಛೇರಿ ಆದೇಶ

ವಿಷಯ: ಕಟ್ಟಡ ಪರವಾನಿಗೆ ನೀಡುವಾಗ ಉದ್ದೇಶಿತ ರಸ್ತೆ ವಿಸ್ತರಣೆಗಾಗಿ ಕಾಯ್ದಿರಿಸಿದ ಜಾಗವನ್ನು ಹಸ್ತಾಂತರಿಸಿಕೊಳ್ಳುವ ಕುರಿತು.

.....

ಸರ್ಕಾರದಿಂದ ದಿನಾಂಕ: 22-06-2007 ರಲ್ಲಿ ಅನುಮೋದಿಸಲಾಗಿರುವ ಪರಿಷ್ಕೃತ ಮಾಸ್ಟರ್ ಪ್ಲಾನ್–2015 (Approved by Govt. – G.O. No. UDD/540/ BEM/AA/SE 2004) ರಲ್ಲಿ ಅನೇಕ ರಸ್ತೆಗಳನ್ನು ಅಗಲೀಕರಣಕ್ಕಾಗಿ ಸೂಚಿಸಲಾಗಿದ್ದು, ಇಂತಹ ರಸ್ತೆಗಳಿಗೆ ಲಗತ್ತಾಗಿ ಬರುವ ನಿವೇಶನಗಳಿಗೆ ಕಟ್ಟಡ ನಕ್ಷೆ ಮಂಜೂರಾತಿ ಕೋರಿ ಪಾಲಿಕೆಗೆ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಅನೇಕ ಪ್ರಕರಣಗಳಲ್ಲಿ ರಸ್ತೆ ಅಗಲೀಕರಣಕ್ಕಾಗಿ ಸೂಚಿಸಲಾಗಿರುವ ಜಾಗವನ್ನು ನಕ್ಷೆ ಮಂಜೂರಾತಿ ನೀಡುವಾಗ ಆಯಾ ರಸ್ತೆಗಳಿಗೆ ಅನುಗುಣವಾಗಿ ನಕ್ಷೆಯಲ್ಲಿ ಕಾಯ್ದಿರಿಸಲಾಗುತ್ತಿದೆ. ಅದರಂತೆ, ಪುಕ್ಕಟೆಯಾಗಿ ಅರ್ಜಿದಾರರು ಪಾಲಿಕೆಗೆ ರಸ್ತೆ ವಿಸ್ತರಣೆಗೆ ಕ್ಷೇತ್ರವನ್ನು ಹಸ್ತಾಂತರಿಸುವುದು ಕಡ್ಡಾಯವಾಗಿರುತ್ತದೆ.

ಮಹಾಯೋಜನೆಯ ಪ್ರಸ್ತಾವಿತ ರಸ್ತೆ ಪಾಲಿಕೆಯಿಂದ ಅಧಿಸೂಚನೆ ಹೊರಡಿಸಲಾದ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಅರ್ಜಿದಾರರು ಉದ್ದೇಶಿತ ನಕ್ಷೆಯಲ್ಲಿ ನಮೂದಿಸಲಾದ ವಿಸ್ತೀರ್ಣಕ್ಕೆ ಅನುಗುಣವಾಗಿ ಪಾಲಿಕೆಗೆ ಪುಕ್ಕಟೆಯಾಗಿ ಪರಿತ್ಯಾಜ್ಯನ ಪತ್ರದ ಮುಖಾಂತರ ಹಸ್ತಾಂತರಿಸಿಕೊಳ್ಳುವ ಪ್ರಕ್ರಿಯೆಯನ್ನು ಸರಳೀಕರಣಗೊಳಿಸುವ ಹಿನ್ನಲೆಯಲ್ಲಿ ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ / ಉತ್ತರ) ರವರ ಮಟ್ಟದಲ್ಲಿಯೇ ಹಸ್ತಾಂತರಿಸಿಕೊಳ್ಳುವುದು. ಅವಶ್ಯಕತೆ ಇದ್ದು ಈ ಹಿನ್ನಲೆಯಲ್ಲಿ 20,000 ಚ.ಮೀ ವಿಸ್ತೀರ್ಣಕ್ಕಿಂತ ಕಡಿಮೆ ಇರುವ ವಸತಿ ಸಮುಚ್ಚಯ ಕಟ್ಟಡ ಮತ್ತು 12,000 ಚ.ಮೀ ವಿಸ್ತೀರ್ಣಕ್ಕಿಂತ ಕಡಿಮೆ ಇರುವ ವಸತಿಯೇತರ ವಿಸ್ತೀರ್ಣದ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಲಾಗುತ್ತಿದ್ದು, ಈ ಸಂದರ್ಭದಲ್ಲಿ ರಸ್ತೆ ವಿಸ್ತರಣೆಗಾಗಿ ಕಾಯ್ದಿರಿಸಿದ ಪ್ರದೇಶವನ್ನು ಪರಿತ್ಯಾಜ್ಯನಾ ಪತ್ರ ಮುಖೇನ ಅರ್ಜಿದಾರರಿಂದ ನೊಂದಾಯಿಸಿಕೊಳ್ಳಲಾಗುತ್ತದೆ. ಇಂತಹ ಪ್ರಕರಣಗಳಲ್ಲಿ ಮಹಾಯೋಜನೆಯಲ್ಲಿ ಪ್ರಸ್ತಾಪಿಸಲಾದ ಉದ್ದೇಶಿತ ರಸ್ತೆಯ ಜಾಗವನ್ನು ಉದ್ದೇಶಿತ ನಕ್ಷೆಯಲ್ಲಿ ಸೂಕ್ತವಾಗಿ ಅಳವಡಿಸಲಾಗುತ್ತದೆ. ಇಂತಹ ಪ್ರಕರಣಗಳಲ್ಲಿ ಅಭಿವೃದ್ಧಿದಾರರು ಟಿ.ಡಿ.ಆರ್ ಪಡೆಯದೇ ಹಾಗೂ ಪಾಲಿಕೆಗೆ ನೊಂದಾಯಿತ ಪರಿತ್ಯಾಜ್ಯನಾ ಪತ್ರ ಮುಖೇನ ಹಸ್ತಾಂತರಿಸುತ್ತಿದ್ದು, ಈ ಅಧಿಕಾರವು ಈಗ ಜಂಟಿ ಆಯುಕ್ತರು ವಲಯ ಕಛೇರಿ ರವರಿಗೆ ಇರುತ್ತದೆ. ಇದರಿಂದಾಗಿ ಹಸ್ತಾಂತರ ಪ್ರಕ್ರಿಯೆಯಲ್ಲಿ ಕೆಲವು ಪ್ರಕರಣಗಳನ್ನು ವಿಳಂಬವಾಗುತ್ತಿರುವುದನ್ನು ಗಮನಿಸಲಾಗಿದ್ದು, ಇನ್ನು ಮುಂದೆ ಆಯಾ ನಕ್ಷೆ ಮಂಜೂರಾತಿ ನೀಡಿರುವ ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ / ಉತ್ತರ) ಅವರವರ ಅಧಿಕಾರ ವ್ಯಾಪ್ತಿಯಲ್ಲಿನ ಪ್ರಕರಣಗಳಿಗೆ ಸಂಬಂಧಿಸಿದ ಪರಿತ್ಯಾಜ್ಯನಾ ಪತ್ರವನ್ನು ನೊಂದಾಯಿಸಿಕೊಳ್ಳುವುದು ಅವಶ್ಯಕತೆ ಕಂಡು ಬಂದಿದ್ದರಿಂದ ಹಸ್ತಾಂತರ ಪ್ರಕ್ರಿಯೆ ಸರಳೀಕರಣಗೊಳಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಕಟ್ಟಡ ನಕ್ಷೆ ಅನುಮೋದನೆ ಸಂಬಂಧ ರಸ್ತೆ ವಿಸ್ತರಣೆಗೆ ಬೇಕಾಗಿರುವ ಜಾಗವನ್ನು ನಕ್ಷೆ ಮಂಜೂರಾತಿ ಸಮಯದಲ್ಲಿ ಕಾಯ್ದಿರಿಸಲಾಗುತ್ತಿದ್ದು, ನಕ್ಷೆ ಮಂಜೂರಾತಿ ಸಂದರ್ಭದಲ್ಲಿ ಕಾಯ್ದಿರಿಸಿದ ಕ್ಷೇತ್ರವನ್ನು ನಕ್ಷೆ ಬಿಡುಗಡೆ ಮಾಡುವ ಪೂರ್ವದಲ್ಲಿ ಸದರಿ ರಸ್ತೆಯ ಕ್ಷೇತ್ರವನ್ನು ಸ್ವತ್ತಿನ ಮಾಲೀಕರಿಂದ ಪಾಲಿಕೆಗೆ ಉಚಿತವಾಗಿ (ಯಾವುದೇ ಟಿ.ಡಿ.ಆರ್ ನೀಡದಿರುವ ಪ್ರಕರಣಗಳಲ್ಲಿ) ಹಸ್ತಾಂತರಿಸಿಕೊಳ್ಳಲು ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ / ಉತ್ತರ) ಇವರಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶ ನೀಡಲಾಗಿದೆ.

## ಷರತ್ತುಗಳು:

1) ಈ ಆದೇಶವು ಕೇಂದ್ರ ಕಛೇರಿಯ ವ್ಯಾಪ್ತಿಗೆ ಬರುವ ನಕ್ಷೆ ಮಂಜೂರಾತಿ ಪ್ರಕರಣಗಳಿಗೆ ಸೀಮಿತವಾಗಿರುತ್ತದೆ.
2) ಸಂಬಂಧಿಸಿದ ಜಂಟಿ ನಿರ್ದೇಶಕರು, ನಗರ ಯೋಜನೆ ಪರಿತ್ಯಾಜ್ಯನಾ ಪತ್ರ ನೊಂದಾಯಿತವಾದ ಪೂರ್ವದಲ್ಲಿ ಅಗತ್ಯ ವಿಸ್ತೀರ್ಣ, ಅಳತೆ, ಮಾಲೀಕತ್ವದ ದಾಖಲೆ, ಚೆಕ್‌ಬಂದಿ ಮುಂತಾದ ಅಗತ್ಯ ವಿವರಗಳನ್ನು ಖಾತರಿಪಡಿಸಿಕೊಂಡು ಕ್ರಮ ವಹಿಸುವುದು.
3) ಪರಿತ್ಯಾಜ್ಯನಾ ಪತ್ರ ನೊಂದಾಯಿಸಿದ ನಂತರ ಸಂಬಂಧಿಸಿದ ಕಂದಾಯ ಇಲಾಖೆಗೆ ಆಯುಕ್ತರ ಹೆಸರಿಗೆ ಖಾತಾ ನೊಂದಣಿ ಮಾಡುವಂತೆ ಲಿಖಿತವಾಗಿ ಅಗತ್ಯ ದಾಖಲೆಯೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.
4) ರಸ್ತೆ ವಿಸ್ತರಣೆಗಾಗಿ ಪರಿತ್ಯಾಜ್ಯನಾ ಪತ್ರ ಮುಖೇನ ನೊಂದಯಿಸದ ಪ್ರಕರಣಗಳ ಕುರಿತು ಪ್ರತ್ಯೇಕ ವಹಿ ತೆಗೆದು ಅದರಲ್ಲಿ ಸಂಪೂರ್ಣ ವಿವರಗಳೊಂದಿಗೆ ದಾಖಲಿಸುವುದು.
5) ಮಾಹಿತಿ ಸಲುವಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಂಬಂಧಿಸಿದ ವಲಯ ಮುಖ್ಯಸ್ಥರಿಗೆ ಕಳುಹಿಸತಕ್ಕದ್ದು.

ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

25/

## ಪ್ರತಿಯನ್ನು:

1) ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಪರ ನಿರ್ದೇಶಕರು, ನಗರ ಯೋಜನೆ ಇವರ ಮಾಹಿತಿಗಾಗಿ ಕಳುಹಿಸಿದೆ.
4) ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ ಮತ್ತು ಉತ್ತರ) ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
5) ಕಛೇರಿ ಕಡತಕ್ಕೆ / ಪ್ರತಿ.
6) ಆಯುಕ್ತರ ಆಪ್ತ ಶಾಖೆಗೆ.